# 'ರಾಮೋ ವಿಗ್ರಹವಾನ್ ಧರ್ಮಃ'

ಪಿ.ಎಂ. ಗಲಗಲಿ



## ಧರ್ಮಮೂರ್ತಿ ಶ್ರೀರಾಮಚಂದ್ರ

**ಭಾ**ಗವತ ಪುರಾಣದಲ್ಲಿ ಭಗವಂತನು ಮಾನವನಾಗಿ ಜನ್ಮವೆತ್ತಿ ಬರುವ ಮುಖ್ಯ ಉದ್ದೇಶವನ್ನು ಹೀಗೆ ಹೇಳಿದ್ದಾರೆ: **ಮರ್ತ್ಯಾವತಾರಸ್ತ್ವಿಹ ಲೋಕಶಿಕ್ಷಣಂ ರಕ್ಷೋವಧಾಯೈವ ನ ಕೇವಲಂ ಪ್ರಭೋಃ**– 'ಭಗವಂತನ ಅವತಾರ ಕೇವಲ ದುಷ್ಟನಿಗ್ರಹವಲ್ಲ, ಲೋಕಶಿಕ್ಷಣ'– ಅಂದರೆ, ಜನರು ಧರ್ಮದಿಂದ, ಧರ್ಮಕ್ಕಾಗಿ ಹೇಗೆ ಬಾಳಿ ಬದುಕಬೇಕೆಂದು ತೋರಿಸಿಕೊಡುವುದೇ ಭಗವಂತನ ಮರ್ತ್ಯಾವತಾರದ ಮುಖ್ಯ ಉದ್ದೇಶವಾಗಿದೆ. ಅಂತಹ ಒಂದು ಅವತಾರ ರಾಮಾವತಾರ.

**'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ'** –ಸಮಸ್ತ ಜಗತ್ತಿಗೂ ಆಧಾರ ಭೂತವಾದುದು ಧರ್ಮ. **'ಯೋ ವೈ ಧರ್ಮ ಸತ್ಯಂ ತತ್'** – ಧರ್ಮವೇ ಸತ್ಯ ಎಂದು ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ. ಶ್ರೀರಾಮನು ಅಂತಹ ಧರ್ಮದ ಪ್ರತಿರೂಪನೆಂದು ರಾಮಾಯಣವು ಹಲವಾರು ವಿಧದಲ್ಲಿ ವರ್ಣಿಸುತ್ತದೆ.

ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ನಿಶ್ಚಯಿಸಿದಾಗ, ಪ್ರಜೆಗಳು ಅದಕ್ಕೆ ಹೃದಯಪೂರ್ವಕವಾಗಿ ತಮ್ಮ ಸಮ್ಮತಿಯನ್ನು ಹೀಗೆ ಸೂಚಿಸುತ್ತಾರೆ:

**ರಾಮಃ ಸತ್ಪುರುಷೋ ಲೋಕೇ ಸತ್ಯಃ ಸತ್ಯಪರಾಯಣಃ ।**
**ಸಾಕ್ಷಾದ್ರಾಮಾದ್ವಿನಿವೃತ್ತೋ ಧರ್ಮಶ್ಚಾಪಿ ಶ್ರಿಯಾ ಸಹ ॥**

'ಸತ್ಪುರುಷನೆಂಬ ಕೀರ್ತಿಯು ಲೋಕದಲ್ಲಿ ರಾಮನಿಗೆ ಮಾತ್ರವೇ ಸಲ್ಲುವುದು. ಅವನು ಸತ್ಯಧರ್ಮಗಳನ್ನು ಎಂದಿಗೂ ಮೀರಿ ನಡೆಯುವವನಲ್ಲ. ಧರ್ಮವೂ ರಾಜ್ಯಲಕ್ಷ್ಮಿಯೂ ರಾಮನಿಂದ ಸ್ಥಿರವಾಗಿ ನಿರ್ವಾಹಗೊಳ್ಳುತ್ತವೆ."

ಮಂಥರೆಯು ಕೈಕೇಯಿಯ ಹತ್ತಿರ, ಚಾಡಿ ಹೇಳಲು ಬಂದಾಗ, ಕೈಕೇಯಿಯೇ ರಾಮನ ಗುಣಗಳನ್ನು ಹೀಗೆ ಕೊಂಡಾಡುತ್ತಾಳೆ:

**ಧರ್ಮಜ್ಞೋ ಗುಣವಾನ್ ದಾಂತಃ ಕೃತಜ್ಞಃ ಸತ್ಯವಾನ್ ಶುಚಿಃ**

'ರಾಮನು ಧರ್ಮಜ್ಞ, ಗುಣಶಾಲಿ, ಜಿತೇಂದ್ರಿಯ, ಕೃತಜ್ಞ, ಸತ್ಯಶೀಲ ಮತ್ತು ಪರಿಶುದ್ಧ ಚಾರಿತ್ರ್ಯವುಳ್ಳವನು.'

ಮುಂದುವರಿದು ಕೈಕೇಯಿ ಹೇಳುತ್ತಾಳೆ: "ರಾಮನು ಸದಾ ಪ್ರಶಾಂತ ಸ್ವಭಾವದವನು, ಮೃದುವಾಗಿ ಮಾತನಾಡುವವನು. ಕಠಿಣವಾಗಿ ಮಾತನಾಡಿಸಿದರೂ ಪ್ರತ್ಯುತ್ತರವನ್ನು ನುಡಿಯುತ್ತಿರಲಿಲ್ಲ. ಎಂದೋ ಇನ್ನೊಬ್ಬರು ಮಾಡಿದ ಒಂದು ಉಪಕಾರವನ್ನು ನೆನಪಿನಲ್ಲಿಟ್ಟುಕೊಂಡಿರುತ್ತಿದ್ದನೇ ಹೊರತು, ತನಗಾದ ನೂರಾರು ಅಪಕಾರಗಳನ್ನು ಸ್ಮರಿಸುತ್ತಿರಲಿಲ್ಲ. ಲೌಕಿಕ ವ್ಯವಹಾರಗಳಲ್ಲಿ ಅವನು ನಿಪುಣ, ಅನೇಕ ಕಲೆಗಳಲ್ಲಿ ಪಿಶಾರದ. ಅವನು ಸೋಮಾರಿಯಾಗದೆ ಯಾವಾಗಲೂ ಜಾಗರೂಕನಾಗಿದ್ದನು. ಅವನು ತನ್ನಲ್ಲಿನ ದೋಷಗಳನ್ನೂ, ಪರರ ದೋಷವನ್ನೂ ತಿಳಿದವನು."

ರಾಮನು ಕಾಡಿಗೆ ಹೊರಟಾಗ ಅಯೋಧ್ಯೆಯ ನಿವಾಸಿಗಳು ಅವನ ಸದ್ಗುಣಗಳನ್ನು ಹೇಳಿಕೊಂಡು ಹೀಗೆ ಗೋಳಾಡುತ್ತಾರೆ. ಅವರ ಪ್ರಕಾರ ರಾಮನಲ್ಲಿ ಆರು ಶ್ರೇಷ್ಠ ಗುಣಗಳಿದ್ದವು:

**"ಅಹಿಂಸೆ, ದಯೆ, ವಿದ್ಯೆ, ಸದಾಚಾರ, ಇಂದ್ರಿಯನಿಗ್ರಹ ಮತ್ತು ಮನಶ್ಶಾಂತಿ** – ಈ ಆರು ಗುಣಗಳು ಪುರುಷೋತ್ತಮನಾದ ರಘುಕುಲತಿಲಕನಿಗೆ ಭೂಷಣಪ್ರಾಯವಾಗಿವೆ."

ಸೀತಾಮಾತೆಯನ್ನು ಅಪಹರಿಸಲು ಮುಂದಾದ ರಾವಣನಿಗೆ, ರಾಮನ ಮಹಿಮೆಯ ಬಗ್ಗೆ ಮಾರೀಚ ಹೇಳುವ ಮಾತು ಹೀಗಿದೆ:

**ರಾಮೋ ವಿಗ್ರಹವಾನ್ ಧರ್ಮಃ ಸಾಧುಃ ಸತ್ಯಪರಾಕ್ರಮಃ ।**
**ರಾಜಾ ಸರ್ವಸ್ಯ ಲೋಕಾನಾಂ ದೇವಾನಾಂ ಮಘವಾನಿವ ॥**

"ರಾಮನೆಂದರೆ, ಶರೀರಧಾರಿಯಾದ ಸಾಕ್ಷಾತ್ ಧರ್ಮಪುರುಷ, ಸತ್ಯಸಂಧನಾದ ಸತ್ಪುರುಷ. ದೇವತೆಗಳಿಗೆ ಇಂದ್ರನಿರುವಂತೆ, ರಾಮನು ಸಕಲರನ್ನೂ ಸಂತೋಷಪಡಿಸುವ ಪ್ರಭುವಾಗಬಲ್ಲನು."

## ರಾಜ್ಯಾಧಿಕಾರ ತ್ಯಾಗ

ಕೈಕೇಯಿ "ತಂದೆಯ ಮಾತನ್ನು ನಡೆಸಿಕೊಡುವುದಕ್ಕಾಗಿ ನೀನು ರಾಜ್ಯ ತ್ಯಜಿಸಿ ಹದಿನಾಲ್ಕು ವರುಷಗಳ ಕಾಲ ಕಾಡಿಗೆ ಹೋಗುತ್ತೀಯೋ ಇಲ್ಲವೋ?" ಪ್ರಶ್ನಿಸಿದಾಗ, ಶ್ರೀರಾಮಚಂದ್ರನು ಹೀಗೆ ಉಚ್ಚರಿಸುತ್ತಾನೆ:

"ತಾಯಿ, ಗುರುವಾಗಿಯೂ, ರಾಜನಾಗಿಯೂ ನನಗೆ ಹಿತಕಾರಿಯಾಗಿರುವ ನನ್ನ ತಂದೆ ಅಪ್ಪಣೆ ಕೊಟ್ಟರೆ, ಅಗ್ನಿಯಲ್ಲಿ ಬೇಕಾದರೆ ಬೀಳುತ್ತೇನೆ! ತೀಕ್ಷ್ಣ ವಿಷವನ್ನಾದರೂ ಪಾನ ಮಾಡುತ್ತೇನೆ! ಸಮುದ್ರದಲ್ಲಿಯಾದರೂ ಮುಳುಗುತ್ತೇನೆ!"

**ನಾಹಂ ಅರ್ಥಪರೋ ದೇವಿ ಲೋಕಮಾವಸ್ತುಮುತ್ಸಹೇ ।**
**ವಿದ್ಧಿ ಮಾಂ ಋಷಿಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಂ ॥**

"ತಾಯಿ, ನಾನು, ಈ ಸಿಂಹಾಸನ, ಸುಖ–ಭೋಗ, ರಾಜ್ಯ–ಭೋಗಕ್ಕಾಗಿ ಹುಟ್ಟಿಬಂದಿಲ್ಲ. ನೀನು ನನ್ನನ್ನು ಈ ವಿಷಯದಲ್ಲಿ ಋಷಿಯೆಂದು ತಿಳಿ. ನಾನು ಕೇವಲ ಧರ್ಮಕ್ಕಾಗಿ, ಧರ್ಮಕ್ಕೋಸ್ಕರ ಬಾಳಿ ಬದುಕುತ್ತೇನೆ."

ಶ್ರೀರಾಮನು ಕೈಕೇಯಿಗೆ ಕೊಟ್ಟ ಉತ್ತರದಲ್ಲಿ, ತನ್ನ ಜನ್ಮವು **'ಧರ್ಮಸಂಸ್ಥಾಪನಾಯ'** – ಧರ್ಮವನ್ನು ಸಂಸ್ಥಾಪಿಸಲು ಆಗಿದೆ ಎನ್ನುವುದನ್ನು ಸ್ಪಷ್ಟಪಡಿಸಿದ್ದಾನೆ. ತಂದೆಯ ವಚನವನ್ನು ಪಾಲಿಸುವುದಕ್ಕಾಗಿ ಎಂತಹ ತ್ಯಾಗಕ್ಕೂ ಸಿದ್ಧನಾದ ರಾಮಚಂದ್ರ, ತಂದೆಯ ವಚನವನ್ನು ಪಾಲಿಸುವುದೇ ತನ್ನ ಧರ್ಮ ಎಂದು ಹೀಗೆ ಸಾರುತ್ತಾನೆ:

**ನ ಹಿ ಅತೋ ಧರ್ಮಚರಣಂ ಕಿಂಚಿದಸ್ತಿ ಮಹತ್ತರಂ ।**
**ಯಥಾ ಪಿತರಿ ಶುಶ್ರೂಷಾ ತಸ್ಯ ವಾ ವಚನಕ್ರಿಯಾ ॥**

"ತಾಯಿತಂದೆಗಳ ಶುಶ್ರೂಷೆ ಮತ್ತು ಅವರು ಹೇಳಿದಂತೆ ನಡೆಯುವುದು– ಇವಕ್ಕಿಂತಲೂ ಶ್ರೇಷ್ಠವಾದ ಧರ್ಮ ಬೇರೊಂದು ಇಲ್ಲ." ಶ್ರೀರಾಮನ ಈ ಮಾತು **'ಮಾತೃದೇವೋ ಭವ'** ಎನ್ನುವ ವೇದ ವಚನದ ಸಾರವಾಗಿದೆ.

ಶ್ರೀರಾಮನು ತಾನು ನಂಬಿದ ಧರ್ಮವನ್ನು ಎಷ್ಟು ನಿಷ್ಠುರತೆಯಿಂದ, ದೃಢತೆಯಿಂದ ಪಾಲಿಸುತ್ತಿದ್ದನು ಎಂಬುದಕ್ಕೆ ಅವನ ರಾಜ್ಯತ್ಯಾಗ ಮತ್ತು ಹದಿನಾಲ್ಕು ವರುಷಗಳ ಅರಣ್ಯವಾಸವೇ ನಿದರ್ಶನವಾಗಿದೆ. "ನಾನು ಕೈಕೇಯಿಗೆ ಮಾತುಕೊಟ್ಟು, ಅದಕ್ಕೆ ಸಿಕ್ಕಿಬಿದ್ದಿದ್ದೇನೆ. ನೀನೇ ನನ್ನ ಮಾತನ್ನು ಉಲ್ಲಂಘಿಸಿ, ನನ್ನನ್ನು ಪ್ರತಿಭಟಿಸಿ, ರಾಜನಾಗು" ಎಂದು ಸ್ವತಃ ಅವನ ತಂದೆ ದಶರಥನೇ ಬಂಡಾಯ ಹೂಡಲು ರಾಮನನ್ನು ಪ್ರೇರೇಪಿಸುತ್ತಾನೆ. ಸಮಸ್ತ ಅಯೋಧ್ಯೆಯ ಜನತೆ ಹಾಗೂ ಮಂತ್ರಿಮಂಡಲದ ಬೆಂಬಲ ರಾಮನಿಗಿತ್ತು. ಲಕ್ಷ್ಮಣನೂ ದಶರಥನ ಮಾತನ್ನು ಮೀರುವಂತೆ ಒತ್ತಾಯಿಸುತ್ತಿದ್ದ. ಕುಲಗುರುಗಳಾದ ವಸಿಷ್ಠರು, ಭರತ–ಶ್ರೀರಾಮರ ನಡುವೆ ಯಾರು ರಾಜನಾಗಬೇಕು ಎಂಬ ವಾದದಲ್ಲಿ, **'ಇಕ್ಷ್ವಾಕೂಣಾಂ ಹಿ ಸರ್ವೇಷಾಂ ರಾಜಾ ಭವತಿ ಅಗ್ರಜಃ, ನ ಅವರಃ'** – ಇಕ್ಷ್ವಾಕು ವಂಶದಲ್ಲಿ ಹಿರಿಯಣ್ಣನೇ ರಾಜನಾಗಬೇಕು, ಕಿರಿಯನಲ್ಲ ಎಂದು ಸ್ಪಷ್ಟವಾಗಿ ನಿರ್ಣಯವನ್ನು ಕೊಡುತ್ತಾರೆ. ಅರಣ್ಯಕ್ಕೆ ಬಂದ ಭರತನು "ನನಗೆ ರಾಜ್ಯ ಬೇಡ. ನೀನೇ ರಾಜ್ಯಾಧಿಕಾರವನ್ನು ಸ್ವೀಕರಿಸು" ಎಂದು ಅಂಗಲಾಚಿ ಬೇಡಿಕೊಳ್ಳುತ್ತಾನೆ. ಇಷ್ಟಾದರೂ, ರಾಮನು ತನಗೆ ಸೇರಬೇಕಾಗಿದ್ದ ರಾಜ್ಯವನ್ನು ತೃಣಸಮನಾಗಿ ಕಡೆಗಣಿಸಿ, ವನವಾಸವನ್ನೇ ಆಯ್ಕೆ ಮಾಡಿಕೊಂಡನು.

ಶ್ರೀರಾಮನ ಈ ತ್ಯಾಗಕ್ಕೆ ಸರಿಸಮಾನವಾದ ಇನ್ನೊಂದು ಉದಾಹರಣೆ ಜಗತ್ತಿನ ಇತಿಹಾಸದಲ್ಲೇ ಇಲ್ಲ! ಶ್ರೀರಾಮನು ಕೊಟ್ಟ ಧರ್ಮದ ವ್ಯಾಖ್ಯೆ ಇಂದಿಗೂ ಪ್ರಸ್ತುತ.

### ಪರರ ದುಃಖಗಳಿಗೆ ಅಸಹನೆ

ಶ್ರೀರಾಮನು ದಂಡಕಾರಣ್ಯವನ್ನು ಪ್ರವೇಶ ಮಾಡಿದ ಕೂಡಲೆ, ನೂರಾರು ಸಂಖ್ಯೆಯಲ್ಲಿ ಋಷಿಮುನಿಗಳು ಬಂದು, ರಾಕ್ಷಸರಿಂದ ತಮ್ಮನ್ನು ರಕ್ಷಿಸಬೇಕೆಂದು ಪ್ರಾರ್ಥಿಸುತ್ತಾರೆ. ಆಗ ಶ್ರೀರಾಮನು, "ಋಷಿಗಳಾದವರು ನನ್ನನ್ನು ಪ್ರಾರ್ಥಿಸಬಾರದು. ನನಗೆ ನೀವು ಆಜ್ಞಾಪಿಸಬೇಕು. ರಾಕ್ಷಸರ ಪೀಡೆಯನ್ನು ಪರಿಹರಿಸಲೆಂದೇ ಅರಣ್ಯಕ್ಕೆ ಆಗಮಿಸಿರುವೆ" ಎಂದು ಹೇಳಿ, ಅಲ್ಲಿಯೇ "ನಿಮಗೆ ಹಿಂಸೆಯನ್ನು ಕೊಡುತ್ತಿರುವ ರಾಕ್ಷಸರನ್ನು ಸಮೂಲ ನಾಶಮಾಡುತ್ತೇನೆ" ಎಂದು ಭಯಂಕರ ಪ್ರತಿಜ್ಞೆ ಮಾಡುತ್ತಾನೆ. ಕೆಲಹೊತ್ತಿನ ನಂತರ ಶ್ರೀರಾಮನ ರಾಕ್ಷಸವಧೆಯ ಪ್ರತಿಜ್ಞೆ ಸೀತಾದೇವಿಗೆ ಗೊತ್ತಾಗುತ್ತದೆ. ಇದನ್ನು ಸೀತಾದೇವಿ ಉಗ್ರವಾಗಿ ವಿರೋಧಿಸುತ್ತಾಳೆ. **– ವಿನಾ ವೈರಂ ಚ ರೌದ್ರತಾ –** ವೈರವಿಲ್ಲದೆ ನಾವು ಶತ್ರುತ್ವವನ್ನು ಮಾಡಿಕೊಳ್ಳಬಾರದು. ರಾಕ್ಷಸರು ನಮಗೇನು ಮಾಡಿದ್ದಾರೆ? ಯಾವ ವೈರತ್ವವಿಲ್ಲದೆಯೇ ಈ ಬಗೆಯ ಭೀಷಣ ಪ್ರತಿಜ್ಞೆ ಏಕೆ? ಎಂದು ಪ್ರಶ್ನಿಸುತ್ತಾಳೆ. ಆಗ ಶ್ರೀರಾಮನು ತಾನು ನಂಬಿದ, ಅದರಂತೆ ನಡೆಯುತ್ತಿರುವ ಧರ್ಮದ ಒಂದು ಅಪೂರ್ವ ವ್ಯಾಖ್ಯೆಯನ್ನು ಹೀಗೆ ನೀಡುತ್ತಾನೆ: **ಪರದುಃಖಂ ಚೇತ್ ತದ್ ಅಸಹಿಷ್ಣುತ್ವಮೇವ ಪರಮೋ ಧರ್ಮಃ ಇತಿ ಮೇ ಮತಿಃ, ತಥೈವ ಮತ್ ಸ್ವಭಾವಃ –** " ಸೀತೆ, ಪರರ ದುಃಖಗಳನ್ನು ನೋಡಿ, ಅನ್ಯಾಯ ಅತ್ಯಾಚಾರಗಳನ್ನು ಕಂಡು ಅದನ್ನು ಸಹಿಸದೇ ಇರುವುದೇ ನಿಜವಾದ ಧರ್ಮ. ಇದನ್ನೇ ನಾನು ನಂಬಿದ್ದೇನೆ. ಅದರಂತೆ ನನ್ನ ಸ್ವಭಾವ."

ರಾಮ ಮುಂದುವರಿದು ಹೇಳುತ್ತಾನೆ: "ಸೀತೆ, ನೀನೇ ಒಂದು ಸಲ ನನಗೆ ಹೀಗೆ ಹೇಳಿದ್ದಿ: **ಕ್ಷತ್ರಿಯೈಃ ಧಾರ್ಯತೇ ಚಾಪಂ ಆರ್ತಶಬ್ದೋ ನ ವಿದ್ಯತೇ –** 'ಜನರಿಂದ ನಮ್ಮನ್ನು ರಕ್ಷಿಸಿರಿ ಎಂಬ ಶಬ್ದ ಬರಬಾರದೆಂದು ಕ್ಷತ್ರಿಯರು ಶಸ್ತ್ರಗಳನ್ನು ಧರಿಸುತ್ತಾರೆ' ಎಂದು ಹೇಳಿ ಸೀತಾದೇವಿಯನ್ನು ಸಮಾಧಾನಪಡಿಸುತ್ತಾನೆ.

ಪರರ ದುಃಖಗಳನ್ನು ನೋಡಿಕೊಂಡು ಸುಮ್ಮನೇ ಇರದಿರುವುದೇ ಶ್ರೇಷ್ಠ ಧರ್ಮ ಎಂಬ ಶ್ರೀರಾಮನ ಧರ್ಮದ ವ್ಯಾಖ್ಯೆ ಇಂದಿಗೂ ಪ್ರಸ್ತುತ. ಇಂದು ನಮ್ಮ ಮುಂದೆ ಅತ್ಯಾಚಾರ, ಅನ್ಯಾಯ, ಸ್ತ್ರೀಯರ ಮಾನಭಂಗ, ಗೋವಧೆ– ಇತ್ಯಾದಿ ನಡೆಯುತ್ತಿದ್ದರೂ ನಾವು ನೋಡಿಯೂ ನೋಡದಂತೆ ಸುಮ್ಮನಿರುತ್ತೇವೆ. ಇದು ಶ್ರೀರಾಮ ಹೇಳಿದ ಧರ್ಮವಲ್ಲ. ಶ್ರೀರಾಮನ ಧರ್ಮದ ವ್ಯಾಖ್ಯಾನ ನಮ್ಮನ್ನು ಎಚ್ಚರಿಸಲಿ!

### ಶರಣಾಗತ ವಾತ್ಸಲ್ಯ

ರಾಮನ ವ್ಯಕ್ತಿತ್ವದಲ್ಲಿನ ವಿಶಿಷ್ಟ ಲಕ್ಷಣಗಳಲ್ಲಿ ಶರಣಾಗತ ವಾತ್ಸಲ್ಯವೂ ಒಂದು. ಹಾಗೆಂದೇ ವಾಲ್ಮೀಕಿಗಳು ಹೇಳುತ್ತಾರೆ:

**ಉತ್ಸವೇಷು ಮನುಷ್ಯಾಣಾಂ ಪಿತೇವ ಪರಿತುಷ್ಯತಿ ।**
**ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ ॥**

'ಮಕ್ಕಳ ಅಭ್ಯುದಯವನ್ನು ಕಂಡು ಆನಂದಿಸುವ ತಂದೆಯಂತೆ, ಶ್ರೀರಾಮನು ಪ್ರಜೆಗಳ ಅಭ್ಯುದಯದಲ್ಲಿ ಸಂತೋಷಿಸುತ್ತಾನೆ. ಅವರಿಗೆ ಏನಾದರೂ ಹಾನಿ ಉಂಟಾದರೆ, ದುಃಖಿತನಾಗುತ್ತಾನೆ.'

ರಾವಣನ ತಮ್ಮ ವಿಭೀಷಣನು ತನ್ನಲ್ಲಿ ಶರಣಾಗತನಾಗಿ ಬಂದಾಗ, ಅವನನ್ನು ರಾಮನು ತನ್ನ ಸಹೋದರನಂತೆ ಸ್ವಾಗತಿಸುತ್ತ ಹೀಗೆ ಹೇಳುತ್ತಾನೆ:

**ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ ।**
**ದೋಷೋ ಯದ್ಯಪಿ ತಸ್ಯ ಸ್ಯಾತ್ ಸತಾಮೇತದಗರ್ಹಿತಮ್ ॥**

"ಮಿತ್ರಭಾವದಿಂದ ಬಂದಿರುವ ವಿಭೀಷಣನನ್ನು ಎಂದಿಗೂ ತ್ಯಜಿಸುವುದಿಲ್ಲ. ಶರಣಾಗತನಲ್ಲಿ ಎಷ್ಟು ದೋಷಗಳಿದ್ದರೂ ಅವನಿಗೆ ಆಶ್ರಯವನ್ನು ಕೊಡುವುದು ಸಜ್ಜನರ ಲಕ್ಷಣ."

ಮುಂದುವರಿದು ಸುಗ್ರೀವನಿಗೆ ಶ್ರೀರಾಮ ಹೀಗೆ ಹೇಳುತ್ತಾನೆ: "ನಿನಗೆ ಶರಣಾಗತನಾದೆ, ನಿನ್ನವನಾದೆ ಎಂದು ಒಂದೇ ಬಾರಿ ಪ್ರಾರ್ಥಿಸುವ ಸರ್ವಭೂತಗಳಿಗೂ ನಾನು ಅಭಯವನ್ನು ಕೊಡುತ್ತೇನೆ; ಇದು ನನ್ನ ವ್ರತ. ಸುಗ್ರೀವ, ಶರಣಾಗತನಾದವನು ವಿಭೀಷಣನಾಗಲಿ, ರಾವಣನೇ ಆಗಿರಲಿ."

## ಶ್ರೀರಾಮನ ಧರ್ಮಯುದ್ಧ

ಯುದ್ಧವೆಂದ ಮೇಲೆ ಅಲ್ಲಿ ಮೊದಲು ಬಲಿಯಾಗುವುದು, ಧರ್ಮ, ನ್ಯಾಯ ಮತ್ತು ನೀತಿ. ಆದರೆ ಜಗತ್ತಿನ ಇತಿಹಾಸದಲ್ಲಿಯೇ ಧರ್ಮದಿಂದ ಯುದ್ಧ ಮಾಡಿದ ಏಕೈಕ ಕ್ಷತ್ರಿಯನೆಂದರೆ ಶ್ರೀರಾಮನೇ! ಅದನ್ನು ಕುರಿತು ಒಂದು ಪ್ರಸಂಗ ಹೀಗಿದೆ: ಇಂದ್ರಜಿತು ಮತ್ತು ಲಕ್ಷ್ಮಣನ ನಡುವೆ ಘನಘೋರ ಯುದ್ಧ ನಡೆಯುತ್ತದೆ. ಇನ್ನು ಲಕ್ಷ್ಮಣನೆದುರು ತನ್ನ ಆಟ ನಡೆಯುವುದಿಲ್ಲವೆಂದರಿತ ಇಂದ್ರಜಿತು ಮಾಯಾಯುದ್ಧವನ್ನು ಆರಂಭಿಸುತ್ತಾನೆ. ಎದುರಿಗೆ ಬಾರದೆ, ಮಾಯಾ ಯುದ್ಧದಿಂದ ಇಂದ್ರಜಿತು ಲಕ್ಷ್ಮಣನನ್ನು ತೀವ್ರ ಗಾಯಗೊಳಿಸುತ್ತಾನೆ. ಬಾಣಗಳಿಂದ ಜರ್ಝರಿತನಾದ ಲಕ್ಷ್ಮಣನು ಬ್ರಹ್ಮಾಸ್ತ್ರವನ್ನು ಬಿಡಲು ನಿರ್ಧರಿಸುತ್ತಾನೆ. ಆದರೆ, ಬ್ರಹ್ಮಾಸ್ತ್ರ ಬಿಡಬೇಕಾದರೆ, ಹಿರಿಯರ ಅನುಮತಿ ಪಡೆಯಬೇಕೆಂಬ ಸತ್‌ಸಂಪ್ರದಾಯ ನಮ್ಮಲ್ಲಿ ಬೆಳೆದು ಬಂದಿದೆ. ಅದರಂತೆ ಲಕ್ಷ್ಮಣನು ಬ್ರಹ್ಮಾಸ್ತ್ರ ಬಿಡಲು ಅವಕಾಶಕೊಡಬೇಕೆಂದು ಶ್ರೀರಾಮಚಂದ್ರನನ್ನು ಕೇಳಿಕೊಳ್ಳುತ್ತಾನೆ.

ಶ್ರೀರಾಮನಿಗೆ ಲಕ್ಷ್ಮಣ ಎಷ್ಟು ಪ್ರೀತಿಪಾತ್ರನೆಂಬುದನ್ನು ರಾಮಾಯಣದಲ್ಲಿ ಹಲವಾರು ಪ್ರಸಂಗಗಳಲ್ಲಿ ಕಾಣುತ್ತೇವೆ. ಸ್ವತಃ ಸೀತಾದೇವಿಯೇ ಆಂಜನೇಯನ ಮುಂದೆ, **ಮತ್ತಃ ಪ್ರಿಯತರೋ ನಿತ್ಯಂ ಭ್ರಾತಾ ರಾಮಸ್ಯ ಲಕ್ಷ್ಮಣಃ** – 'ಶ್ರೀರಾಮನಿಗೆ ನನಗಿಂತಲೂ ಹೆಚ್ಚು ಪ್ರೀತಿ ಲಕ್ಷ್ಮಣನ ಮೇಲೆ' ಎಂದು ಹೇಳುತ್ತಾಳೆ. ಇಂತಹ ಪ್ರೀತಿಯ ತಮ್ಮನು ರಣಾಂಗಣದಲ್ಲಿ ಇಂದ್ರಜಿತುವಿನ ಬಾಣಗಳಿಂದ ಜರ್ಝರಿತನಾಗಿ, ಮೈಯೆಲ್ಲ ರಕ್ತಸಿಕ್ತನಾಗಿ, ಬ್ರಹ್ಮಾಸ್ತ್ರಪ್ರಯೋಗಕ್ಕೆ ಅನುಮತಿ ಕೊಡು ಎಂದು ಕೇಳಿದರೆ, ಶ್ರೀರಾಮನು ಕೊಡುವ ಉತ್ತರ ನಮ್ಮೆಲ್ಲರನ್ನೂ ದಂಗುಪಡಿಸುತ್ತದೆ.

"ಲಕ್ಷ್ಮಣ, ನೀನು ಬ್ರಹ್ಮಾಸ್ತ್ರ ಪ್ರಯೋಗಿಸಿದರೆ, ರಣರಂಗದಲ್ಲಿರುವ ರಾಕ್ಷಸರೆಲ್ಲರೂ ಸಾಯುವುದರ ಜೊತೆಗೆ, ಲಂಕೆಯಲ್ಲಿರುವ ಸ್ತ್ರೀಪುರುಷ ಆಬಾಲವೃದ್ಧರೆಲ್ಲರೂ ನಾಶವಾಗುತ್ತಾರೆ. ಆದ್ದರಿಂದ, **ನೈಕಸ್ಯ ಹೇತೋ ರಕ್ಷಾಂಸಿ ಪೃಥಿವ್ಯಾಂ ಹಂತುಮರ್ಹಸಿ**– ಒಬ್ಬ ಇಂದ್ರಜಿತುವಿನ ಸಲುವಾಗಿ, ಜಗತ್ತಿನ ಎಲ್ಲ ರಾಕ್ಷಸರನ್ನೂ ಕೊಲ್ಲುವುದು ಉಚಿತವಲ್ಲ. **'ಜಹಿ ರಾವಣಿಂ'** – 'ನಿನ್ನ ಪರಾಕ್ರಮದಿಂದ ಇಂದ್ರಜಿತುವನ್ನು ಕೊಲ್ಲು' ಎಂದು ಹೇಳುತ್ತಾನೆ. ಶ್ರೀರಾಮನ ಈ ಉತ್ತರದಿಂದ ಲಕ್ಷ್ಮಣ ಕೋಪಗೊಳ್ಳುತ್ತಾನೆ. ಶ್ರೀರಾಮನ ಧರ್ಮವನ್ನೇ ಪರೀಕ್ಷೆಗೆ ಒಡ್ಡುತ್ತಾನೆ; ಪಣಕ್ಕೆ ಹಚ್ಚುತ್ತಾನೆ; ತನ್ನ ಬತ್ತಳಿಕೆಯಿಂದ ಒಂದು ಸಾಧಾರಣ ಬಾಣವನ್ನು ತೆಗೆದುಕೊಂಡು ಹೀಗೆ ನುಡಿಯುತ್ತಾನೆ:

**ಧರ್ಮಾತ್ಮಾ ಸತ್ಯಸಂಧಶ್ಚ ರಾಮೋ ದಾಶರಥಿರ್ಯದಿ ।**
**ಪೌರುಷೇಣ ಅಪ್ರತಿದ್ವಂದ್ವಃ ಶರೈನಂ ಜಹಿ ರಾವಣಿಂ ॥**

"ಶ್ರೀರಾಮನು ಧರ್ಮಾತ್ಮನಾಗಿದ್ದರೆ, ಸತ್ಯಸಂಧನಾಗಿದ್ದರೆ, ನಿಜವಾದ ಕ್ಷತ್ರಿಯವೀರನಾಗಿದ್ದರೆ ಈ ಬಾಣವು ಇಂದ್ರಜಿತುವನ್ನು ಕೊಲ್ಲಲಿ." ಶ್ರೀರಾಮಮಂತ್ರವನ್ನೇ ಹಾಕಿ ಇಂದ್ರಜಿತುವಿನ ಮೇಲೆ ಬಾಣವನ್ನು ಲಕ್ಷ್ಮಣ ಪ್ರಯೋಗಿಸಿದ. ಕ್ಷಣಾರ್ಧದಲ್ಲಿ ಇಂದ್ರಜಿತು ಗತಪ್ರಾಣನಾದ !

## ಹೃದಯವಂತಿಕೆ

ಶ್ರೀರಾಮನು ವಿಶಾಲಹೃದಯಿ. ತನ್ನ ಶತ್ರುಗಳನ್ನು ಕೂಡ ಅವನು ದ್ವೇಷಿಸುತ್ತಿರಲಿಲ್ಲ. ಅದಕ್ಕೆ ಸಾಕ್ಷಿ ಅವನು ರಾವಣನೊಡನೆ ನಡೆದುಕೊಂಡ ರೀತಿ. ಯುದ್ಧಾರಂಭದಲ್ಲಿ ಸ್ವಯಂ ರಾವಣನೇ ಯುದ್ಧಕ್ಕೆ ಹೊರಟುಬಂದಾಗ, ರಾಮ ಮೊದಲ ಬಾರಿಗೆ ಅವನನ್ನು ಕಾಣುತ್ತಾನೆ. ಅವನ ತೇಜಸ್ಸನ್ನು ಹೀಗೆ ಪ್ರಶಂಸಿಸುತ್ತಾನೆ: **'ಅಹೋ ದೀಪ್ತೋ ಮಹಾತೇಜಾಃ ರಾವಣೋ ರಾಕ್ಷಸೇಶ್ವರಃ'**– 'ಆಹಾ! ರಾಕ್ಷಸೇಶ್ವರನಾದ ರಾವಣನ ಮಹಾತೇಜಸ್ಸು ಬೆಳಗುತ್ತಿದೆ'. ರಾವಣನ ಕಿರೀಟವನ್ನು ಭೇದಿಸಿದ ರಾಮ, ಅವನು ಪ್ರಕಾಶವನ್ನು ಕಳೆದುಕೊಂಡ ಸೂರ್ಯನಂತೆ ಆಗಿರುವುದನ್ನು ಕಂಡು, "ನೀನು ಆಯಾಸಗೊಂಡಿದ್ದೀಯೆ. ಆದ್ದರಿಂದ ನನ್ನ ಬಾಣಗಳಿಂದ ನಿನ್ನನ್ನು ಮೃತ್ಯುವಿಗೆ ಸದ್ಯಕ್ಕೆ ಗುರಿ ಮಾಡುವುದಿಲ್ಲ." ಎಂದು ಹೇಳಿ ಅವನನ್ನು ಹಿಂದಕ್ಕೆ ಕಳಿಸುತ್ತಾನೆ.

ರಾವಣವಧೆಯ ನಂತರ, ರಾಮನು ರಾವಣನನ್ನು ಕುರಿತು ಆಡುವ ಮಾತುಗಳು ಉಲ್ಲೇಖಾರ್ಹವಾಗಿವೆ: " ಈ ನಿಶಾಚರನು ಧರ್ಮವಂತನಲ್ಲ, ಸತ್ಯವಂತನಲ್ಲ. ಆದರೆ ಅವನು ತೇಜಸ್ವಿ, ಬಲಶಾಲಿ, ಎಂದಿಗೂ ಕಾಳಗದಲ್ಲಿ ಶೂರನಂತೆ ವರ್ತಿಸುತ್ತಾನೆ. ದೇವೇಂದ್ರ ಮೊದಲಾದವರೂ ಇವನನ್ನು ಸೋಲಿಸಲು ಸಾಧ್ಯವಾಗಲಿಲ್ಲ. "

**ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಂ ।**
**ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥**

"ವೈರಕ್ಕೆ ಮರಣವೇ ಅಂತ್ಯ. ನಾನು ಬಂದ ಕೆಲಸ ಮುಗಿಯಿತು. ಅವನ ಅಂತ್ಯಸಂಸ್ಕಾರ ನಡೆಯಲಿ. ಈಗ ನೀನು ಹೇಗೋ ಅವನೂ ನನಗೆ ಹಾಗೆಯೇ ಆಪ್ತನು."

ಶ್ರೀರಾಮ ಧರ್ಮಾತ್ಮ, ಸತ್ಯಸಂಧ. ಅಪ್ರತಿಮ ಪೂಜ್ಯನಾದ ಅವನು ಧರ್ಮದ ಉತ್ತುಂಗ ಪರ್ವತ. ಜಗತ್ತಿನ ಪರ್ವತಗಳನ್ನು ಅಳೆಯಲು ಹಿಮಾಲಯ ಮಾನದಂಡ. ಅದರಂತೆ, ಜಗತ್ತಿನ ಮಹಾಪುರುಷರನ್ನು ಅಳೆಯಲು ಶ್ರೀರಾಮ ಮಾನದಂಡ! ■

**ವಿವೇಕಪ್ರಭ ಪತ್ರಿಕೆಯ ಚಂದಾದಾರರೇ, ದಯವಿಟ್ಟು ಗಮನಿಸಿ!**

**ಇತ್ತೀಚಿಗೆ ಪೆಟ್ರೋಲ್ ಮತ್ತು ಡಿಸಲ್ ಬೆಲೆಗಳನ್ನು ಸರ್ಕಾರವು ಹೆಚ್ಚಿಸಿದೆ. ಇದರಿಂದಾಗಿ, ಮುದ್ರಣ ಕಾಗದ ಮುಂತಾದ ಪತ್ರಿಕೆಯ ಪ್ರಕಟಣೆಗೆ ಬೇಕಾದ ಅಗತ್ಯ ವಸ್ತುಗಳ ಬೆಲೆಯೂ ಹೆಚ್ಚಿದೆ. ಯಾವ ಲಾಭದ ಉದ್ದೇಶವೂ ಇಲ್ಲದೆ ನಡೆಸುತ್ತಿರುವ ವಿವೇಕಪ್ರಭ ಪತ್ರಿಕೆಯ ಹಣಕಾಸು ಪರಿಸ್ಥಿತಿಗೆ ಈ ಹೆಚ್ಚಳ ಪ್ರತಿಕೂಲ ಪರಿಣಾಮವನ್ನುಂಟುಮಾಡಿದೆ. ಆದ್ದರಿಂದ ಅನಿವಾರ್ಯವಾಗಿ ಪತ್ರಿಕೆಯ ದರವನ್ನು ಹೆಚ್ಚಿಗೆ ಮಾಡಲೇಬೇಕಾದ ಪರಿಸ್ಥಿತಿ ಬಂದಿದೆ. ಆದರೂ ಪತ್ರಿಕೆಯ ಬಿಡಿ ಪ್ರತಿ ಮತ್ತು ಒಂದು ವರ್ಷದ ಚಂದಾದರಗಳಲ್ಲಿ ಮಾತ್ರ ಸ್ವಲ್ಪ ಹೆಚ್ಚಳ ಮಾಡುತ್ತಿದ್ದೇವೆ. ಪತ್ರಿಕೆಯ ಅಭಿಮಾನಿಗಳು ಹೆಚ್ಚುಹೆಚ್ಚಾಗಿ ಆಜೀವ ಚಂದಾದಾರರಾಗಿ ಮತ್ತು ಪೋಷಕರಾಗಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ. ಹೊಸ ದರಗಳು ಹೀಗಿವೆ: 1. ಬಿಡಿಪ್ರತಿ – ರೂ. 10/– ; 2. ವಾರ್ಷಿಕ ಚಂದಾ – ರೂ. 100/; 3. ಮೂರುವರ್ಷದ ಚಂದಾ– ರೂ. 225/–; 4. ಆಜೀವ ಚಂದಾ –ರೂ. 1500/– ; 5. ಪೋಷಕ ಸಹಾಯಧನ– ರೂ. 3000/– ಈಗಾಗಲೇ ಚಂದಾದಾರರಾಗಿರುವವರು, ಹಳೆಯ ದರಗಳಲ್ಲಿಯೇ ಪತ್ರಿಕೆಯನ್ನು ಪಡೆಯುವರು.** – ವ್ಯವಸ್ಥಾಪಕ ಸಂಪಾದಕರು